## 2

ಈಗ ನಾನು ಮರಳುವ ದಾರಿಯಾಗಿ ಮತ್ತೆ ಮಾರ್ಜಿನಲ್ ವಾಕ್‌ವೇ ಮೇಲೆ ನಿಂತಿದ್ದೆ. ವಾಕ್‌ವೇ ಊರಿನ ದಿಕ್ಕಿಗೆ ಚಲಿಸುತ್ತಿದ್ದುದರಿಂದ ನನ್ನ ಯಾನ ಸುಲಭವಾಗಿತ್ತು. ಇನ್ನು ಮರಳುವಿಕೆ ಕಷ್ಟವಾಗುವುದಿದ್ದರೆ ಮೇನ್ ಸ್ಟ್ರೀಮಿನವರಿಗೆ ಆಗಬೇಕಿತ್ತು; ಯಾಕೆಂದರೆ ಮಧ್ಯದ ವಾಕ್‌ವೇ ಗುರಿಯತ್ತ ಚಲಿಸುತ್ತಿದ್ದುದು. ಆದರೆ, ಮೇನ್‌ಸ್ಟ್ರೀಮಿನ ಜನ ಹಿಂತಿರುಗಿ ಬರುವ ಪ್ರಶ್ನೆಯೇ ಇರಲಿಲ್ಲ. ಇದೆಲ್ಲವನ್ನೂ ಯೋಜನಾಬದ್ಧವಾಗಿ ರೂಪಿಸಲಾಗಿದೆ ಎನ್ನುವುದು ನನಗೆ ಸ್ಪಷ್ಟವಾಯಿತು. ಮಧ್ಯದ ವಾಕ್‌ವೇಯಲ್ಲಿ ಮೇನ್‌ಸ್ಟ್ರೀಮ್‌ನ ಕೆಲವು ಮಂದಿ ನನ್ನ ವಿರುದ್ಧ ಗತಿಯಲ್ಲಿ ಸಾಗುತ್ತಿರುವುದನ್ನು ಕಂಡು ಅವರತ್ತ ಕೈಬೀಸಿದೆ; ಅವರಾರೂ ನನ್ನತ್ತ ಗಮನ ಹರಿಸಲಿಲ್ಲ. ಸಹಜವಾಗಿ ಅವರೆಲ್ಲ ಬಹಳ ಉತ್ಸಾಹದಲ್ಲಿದ್ದರು. ನನಗೀಗ ಯಾವ ಆತುರವೂ ಇರಲಿಲ್ಲ. ನಾನು ಊರು ಬಿಟ್ಟು ಎಷ್ಟು ಕಾಲವಾಯಿತು, ಊರು ಎಷ್ಟು ದೂರವಿದೆ ಎನ್ನುವುದೆಲ್ಲ ನನಗೆ ಗೊತ್ತಿರಲಿಲ್ಲ. ಸಾಧಾರಣ ಭೂ ವಲಯಕ್ಕಿಂತ ಆಚೆಗೆ ನಾನಿದ್ದೆನೆಂದು ತೋರುತ್ತದೆ. ಆದರೆ, ಕ್ರಮೇಣ ನಾನು ಪರಿಚಿತ ವಲಯವನ್ನು ಪ್ರವೇಶ ಮಾಡಿದೆ. ನನ್ನ ವಾಕ್‌ವೇಯ ಒಂದು ಬದಿಗೆ ಸಮುದ್ರ ಹಾಗೂ ಸಮುದ್ರ ಬದಿಯ ಬಂಡೆಗಳು, ಮರಳ ದಂಡೆಗಳು; ಇನ್ನೊಂದು ಬದಿಗೆ ಬಯಲು ಬೆಟ್ಟಗಳು, ಹೊಲಗಳು, ಮನೆಗಳು, ಗುಡಿಸಲುಗಳು, ದನಗಳು, ತೋಟಗಳು, ಬೇಲಿಗಳು, ದಡಮೆಗಳು, ಹೂಗಿಡಗಳು, ತರಕಾರಿ ಸಾಲುಗಳು, ತೊಂಡೆ ಚಪ್ಪರಗಳು, ಬೀದಿಗಳು, ಅಂಗಡಿಗಳು, ಸಣ್ಣಪುಟ್ಟ ಮೋಟರು ವಾಹನಗಳು, ಎತ್ತಿನ ಗಾಡಿಗಳು, ಶಾಲೆಯಿಂದ ಬರುವ ಮಕ್ಕಳು ಇತ್ಯಾದಿ. ನನ್ನ ದಾರಿ ರೈಲ್ವೆ ಹಳಿಗಳಿಗೆ ಸಮಾನಾಂತರವಾಗಿ ಹೋಗುತ್ತಿತ್ತು. ಆದ್ದರಿಂದ ಕೆಲವು ಸಲ ಒಂದೋ ಎದುರಾಗಿ, ಇಲ್ಲವೇ ಜತೆಯಾಗಿ ಉಗಿಬಂಡಿಗಳು ಸಹಾ ಬರುತ್ತಿದ್ದವು. ಈ ಉಗಿಬಂಡಿಗಳ ಸದ್ದಿನ ಬಗ್ಗೆ ನಿಮಗೆ ಗೊತ್ತಿರಬಹುದು: ಅದು ಲಯಬದ್ಧವಾಗಿರುತ್ತದೆ. ಏನಾದರೊಂದು ರೀತಿಯಲ್ಲಿ ಅದು ಕಿವಿಗೆ ಹೊಕ್ಕರೆ ಸಾಕು, ಅದೇ ಮತ್ತೆ ಮತ್ತೆ ಮರುಕಳಿಸುತ್ತದೆ: ಕೊಡಕ್ ಬಿಡಕ್, ಧಡಕ್ ಬಡಕ್, ಲಂಡನ್, ಡೆಲ್ಲಿ, ಹರಪ್ಪಾ ಮೊಹೆಂಜದಾರೋ ಇತ್ಯಾದಿ. ನನ್ನ ಕಿವಿಯೊಳಗೆ ಈಗಾಗಲೇ 'ರಿಟರ್ನ್' ಎಂಬ ಪದ ಹೊಕ್ಕು ಕುಳಿತಿತ್ತಲ್ಲ! ಆದ್ದರಿಂದ ಈ ಬಂಡಿಗಳು ಸಾಗುವ ಸದ್ದು 'ರಿಟರ್ನ್, ಯುಟರ್ನ್' ಎಂದು ಕೇಳಿಸತೊಡಗಿತು! ಬೇರೊಂದು ಶಬ್ದವೇ ಕೇಳಿಸದಂತೆ: ರಿಟರ್ನ್ ಯುಟರ್ನ್, ರಿಟರ್ನ್ ಯುಟರ್ನ್ ಎಡ್ ಇನ್‌ಫಿನಿಟಮ್, ನಮ್ಮ ಲೆಕ್ಕದ ಮೇಸ್ಟ್ರು ಹೇಳುತ್ತಿದ್ದ ಹಾಗೆ! ಬಂಡಿಗಳು ಬಂದು ದೂರಕ್ಕೆ ಹೋದರೂ ಈ ಅನುರಣನ ಮಾತ್ರ ಕಿವಿಯೊಳಗೆ ಮೊಳಗುತ್ತಲೇ ಇತ್ತು. ಸ್ವಲ್ಪ ಸಮಯದಲ್ಲಿ ಅದು 'ಲೆಫ್ಟ್‌ಟರ್ನ್ ರೈಟ್‌ಟರ್ನ್' ಆಯಿತು! ನಂತರ 'ಅಬೌಟ್ ಟರ್ನ್'! ಎಲ್ಲದರಲ್ಲೂ ಈ ಟರ್ನ್ ಮಾತ್ರ ಇದ್ದೇ ಇತ್ತು. ದಾರಿಗರೀಗ ನನ್ನನ್ನು ದೂರದಿಂದಲೇ ಕಂಡು ಮಾತಾಡಿಸಲು ಶುರು ಮಾಡಿದರು; ಯಾಕೆಂದರೆ ನಾನು ಗ್ರಾಮಾಂತರದಲ್ಲೇ ಸಾಗುತ್ತಿದ್ದೆ. 'ಎಲ್ಲಿಂದ ಬರ್ತಿದೀರಿ?' ಎಂದು ಕೆಲವರು ವಿಚಾರಿಸಿದರೆ, 'ಕೈಬಿಟ್ಟು ನಿಲ್ಲಬೇಡಿ, ಬಿದ್ದುಬಿಡ್ತೀರಿ!' ಎಂದು ಎಚ್ಚರಿಸುವವರು ಇನ್ನು ಕೆಲವರು. ಒಬ್ಬ ಹೀರುಗೊಳವೆ ಸಮೇತ ಬೊಂಡವೊಂದನ್ನು ತಂದು ಕೊಟ್ಟ. ಅವನಿಗೆ ಥ್ಯಾಂಕ್ಸ್ ಹೇಳುವ ಮುನ್ನವೇ ವಾಕ್‌ವೇ ಮುಂದಕ್ಕೆ ಹೋಗಿಯಾಗಿತ್ತು. ಹೀಗೆ ನನಗೆ ಈ ಜನರ ಪ್ರೀತಿ ಕಂಡು ಮನ ಕರಗಿತು: ಯಾಕೆ ಇವರು ನನ್ನನ್ನು ಈ ರೀತಿ ನೋಡಿಕೊಳ್ಳುತ್ತಿದ್ದಾರೆ? ನಾನಿದಕ್ಕೆ ಅರ್ಹನೇ? ಇವರಿಗೋಸ್ಕರ ನಾನೇನು ಮಾಡಿದ್ದೇನೆ? ಸದಾ